# ಪೌಲನು ಥೆಸಲೋನಿಕದವರಿಗೆ ಬರೆದ ಎರಡನೇ ಪತ್ರಿಕೆ

**ಗ್ರಂಥಕರ್ತ:**

ಯೇಸು ಕ್ರಿಸ್ತನ ಅಪೊಸ್ತಲನಾದ ಪೌಲನು.

**ದಿನಾಂಕ:**

ಕ್ರಿ.ಶ 50 ಮತ್ತು 54 ರ ನಡುವೆ.

**ಧ್ಯೇಯ:**

ಪೌಲನು ಥೆಸಲೋನಿಕದವರಿಗೆ ಬರೆದ ಮೊದಲನೆಯ ಪತ್ರಿಕೆಯಂತೆಯೇ, ಎರಡನೇ ಪತ್ರಿಕೆಯ ಮುಖ್ಯ ವಿಷಯವೂ ಯೇಸು ಕ್ರಿಸ್ತನ ಎರಡನೇ ಬರೋಣವಾಗಿದೆ. ಥೆಸಲೋನಿಕದ ವಿಶ್ವಾಸಿಗಳು ಹಿಂಸೆಗಳನ್ನು ಎದುರಿಸುತ್ತಿದ್ದಾಗ ಕೆಲವು ಧಾರ್ಮಿಕ ನಾಯಕರು ಅಲ್ಲಿಗೆ ಹೋದರು ಮತ್ತು ಕರ್ತನ ದಿನವು ಈಗಾಗಲೇ ಬಂದಿದೆ ಎಂದು ಹೇಳುವ ಮೂಲಕ ಅವರನ್ನು ತೊಂದರೆಪಡಿಸುತ್ತಾ ಇದ್ದರು (2:1-2). ಕರ್ತನ ದಿನವು ಭವಿಷ್ಯದ ಸಮಯವಾಗಿದ್ದು ಯೇಸು ಕ್ರಿಸ್ತನ ಎರಡನೇ ಬರೋಣಕ್ಕೆ ಸಂಬಂಧಿಸಿದೆ ಮತ್ತು ಇತರೆ ಕಾರ್ಯಗಳಾದ ದೇವರ ಕೋಪ ಹಾಗೂ ಶಿಕ್ಷೆ ಅವಿಧೇಯರಿಗೆ ಮತ್ತು ಅಪನಂಬಿಕೆಯುಳ್ಳವರಿಗೆ ಎದುರಾಗುವದನ್ನು ಒಳಗೊಂಡಿದೆ. ಆ ಧಾರ್ಮಿಕ ನಾಯಕರ ತಪ್ಪಾದ ದೃಷ್ಟಿಕೋನವನ್ನು ವಿರೋಧಿಸುತ್ತಾ "ಪಾಪದ ಮನುಷ್ಯನು" (ಅಥವಾ ಅಧರ್ಮಸ್ವರೂಪನು") ಎಂದು ತಾನು ಕರೆದಿರುವಾತನು ಬರುವ ತನಕ ಕರ್ತನ ದಿನ ಬರುವದಿಲ್ಲ ಎಂದು ಅವರಿಗೆ ತಿಳಿಸಿದನು. ಅವನು ಅಂತ್ಯಕ್ರಿಸ್ತನಾಗಿದ್ದು ಈ ಯುಗದ ಕೊನೆಯಲ್ಲಿ ಬರುವನು (1 ಯೋಹಾನ 2:18; ಪ್ರಕ 13; ಮತ್ತಾಯ 24:15-24). ಪೌಲನು ಥೆಸಲೋನಿಕದಲ್ಲಿದ್ದ ವಿಶ್ವಾಸಿಗಳಿಗೆ ಹೆದರಬೇಡಿರಿ ಮತ್ತು ನಾನು ಯೇಸು ಕ್ರಿಸ್ತನ ಕುರಿತು ಕಲಿಸಿರುವ ಸತ್ಯವನ್ನು ಬಿಗಿಯಾಗಿ ಹಿಡಿದುಕೊಳ್ಳಿರಿ ಎಂದು ಪ್ರೋತ್ಸಾಹಪಡಿಸಿದನು. ಅವನು ಆಲಸ್ಯತನ ಮತ್ತು ಸೋಮಾರಿತನದ ವಿಷಯದಲ್ಲಿ ದೊಡ್ಡ ಎಚ್ಚರಿಕೆಯನ್ನು ಕೊಡುವ ಮೂಲಕ ಪತ್ರಿಕೆಯನ್ನು ಮುಕ್ತಾಯಗೊಳಿಸಿದ್ದಾನೆ.

# 1 1

- **1:1** 1 ಥೆಸ 1:1.

*"ಸಿಲ್ವಾನನು"*– ಸೀಲನು. **2**

- **1:2** ರೋಮಾ 1:7. **3**
- **1:3** ರೋಮಾ 1:8.

*“ನಿಮ್ಮ ನಂಬಿಕೆ ಅಭಿವೃದ್ಧಿಯಾಗುತ್ತದೆ”, “ಪ್ರೀತಿ . . . ಹೆಚ್ಚುತ್ತಾ ಬರುತ್ತದೆ”*– 1 ಥೆಸ 3:10,12; 4:10 ನೋಡಿರಿ. ಅವರ ವಿಷಯದಲ್ಲಿ ಪೌಲನ ನಿರೀಕ್ಷೆಗಳು ನೆರವೇರಿದವು, ಅವನ ಪ್ರಾರ್ಥನೆಗಳಿಗೆ ಉತ್ತರಗಳು ದೊರೆತವು. **4**

**1:4** *“ಹೆಚ್ಚಳಪಡುವದು”*– 2 ಕೊರಿಂಥ 7:14. ಇದು ಮುಖಸ್ತುತಿಯಲ್ಲ – 1 ಥೆಸ 2:5. ಅಲ್ಲಿದ್ದ ಸಭೆಯ ವಿಷಯದಲ್ಲಿ ಅವನಿಗೆ ಬಹಳ ಸಂತೋಷವಿತ್ತು ಮತ್ತು ಅವರಿಗೆ ಹಾಗೂ ಇತರರಿಗೂ ಈ ವಿಷಯದಲ್ಲಿ ಹೇಳಲು ಅವನು ಸಂತೋಷವುಳ್ಳವನಾಗಿದ್ದನು.

*“ಕಷ್ಟಗಳು ಮತ್ತು ಹಿಂಸೆಗಳು”*– 1 ಥೆಸ 1:6; 2:14; 3:3. **5**

**1:5** *“ನಿದರ್ಶನ”*– ನಾವು ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟಿರುವದರಿಂದ ನಮಗೆದುರಾಗುವ ಕಷ್ಟಗಳು ಮತ್ತು ಹಿಂಸೆಗಳನ್ನು ನಂಬಿಗಸ್ತರಾಗಿ ಸಹಿಸಿಕೊಳ್ಳುವದು ನಮ್ಮ ನಂಬಿಕೆ ಯಥಾರ್ಥವಾದದ್ದು ಹಾಗೂ ಸಜೀವವಾದದ್ದು ಎಂಬದಕ್ಕೆ ಸಾಕ್ಷಿಯಾಗಿದೆ. ಇದು “ದೇವರ ನೀತಿಯುಳ್ಳ ನ್ಯಾಯತೀರ್ಪಿಗೂ” –ಪುರಾವೆಯಾಗಿದೆ. ಇದರ ಅರ್ಥ ಇಲ್ಲಿ ಅಷ್ಟೊಂದು ಸ್ಪಷ್ಟವಾಗಿಲ್ಲ ಆದರೆ ಅವರನ್ನು ಆಯ್ಕೆ ಮಾಡಿಕೊಳ್ಳುವ ಮತ್ತು ಅವರ ಮಧ್ಯದಲ್ಲಿ ಕಾರ್ಯಮಾಡಬೇಕೆಂಬ ದೇವರ ತೀರ್ಮಾನವನ್ನು ನಂಬಿಕೆಯಲ್ಲಿ ಅವರು ತೋರಿದ ತಾಳ್ಮೆಯ ಮೂಲಕ ದೃಢಪಟ್ಟಿತು ಎಂಬದಾಗಿರಬಹುದು. ಫಿಲಿಪ್ಪಿ 1:27-28 ರೊಂದಿಗೆ ಹೋಲಿಸಿ ನೋಡಿರಿ.

*“ಯೋಗ್ಯರಾಗಿರಬೇಕು”*– ಲೂಕ 20:35; ಪ್ರಕ 3:4 ರೊಂದಿಗೆ ಹೋಲಿಸಿ ನೋಡಿರಿ. ರಕ್ಷಣೆ ಹೊಂದಲು, ದೇವರ ರಾಜ್ಯದೊಳಗೆ ಸೇರಲು ಯಾರೂ ಯೋಗ್ಯರಲ್ಲ – ರೋಮಾ 3:9,19,23; ಕೊಲೊ 1:13-14. ಆದರೆ ವಿಶ್ವಾಸಿಗಳು ತಮ್ಮ ನಡವಳಿಕೆ ಮತ್ತು ನಂಬಿಕೆಯ ಜೀವನದ ಮೂಲಕ ದೇವರು ನಮ್ಮನ್ನು ಬಲಪಡಿಸಿದ್ದಾನೆ ಹಾಗೂ ಆತನ ರಾಜ್ಯಕ್ಕೆ ಸೇರಲು ಬೇಕಾದ ಯೋಗ್ಯತೆಗನುಸಾರ ಜೀವಿಸಲು ಬಲಪಡಿಸಿದ್ದಾನೆ ಎಂಬದನ್ನು ನಿರೂಪಿಸಬಹುದಾಗಿದೆ.

*“ದೇವರ ರಾಜ್ಯ”*– ಮತ್ತಾಯ 4:17 ರ ನೋಟ್ಸ್ ನೋಡಿರಿ.

*“ಕಷ್ಟಗಳು”*– ರೋಮಾ 8:17; ಮತ್ತಾಯ 5:10. ಇದು ಅವರ ಯೋಗ್ಯತೆಗೆ ಪುರಾವೆಯಾಗಿದೆ. ದೇವರ ರಾಜ್ಯದ ನಿಮಿತ್ತ ಕಷ್ಟಗಳನ್ನನುಭವಿಸಲು ನಿರಾಕರಿಸುವವರು ಆ ರಾಜ್ಯಕ್ಕೆ ಯೋಗ್ಯರಾಗುವದಿಲ್ಲ. **6**

**1:6** *“ಪ್ರತಿಯಾಗಿ ಕೊಡುವದು”*– ಸಂಖ್ಯಾ 31:1-3; ಧರ್ಮೋ 32:35,41; ರೋಮಾ 12:19; ಇಬ್ರಿ 10:30.

*“ಪ್ರತಿಯಾಗಿ ಕೊಡುವದು . . . ನ್ಯಾಯವಾಗಿದೆ”*– ಈ ಸತ್ಯವನ್ನು ನಾವು ಸತ್ಯವೇದ ಎಲ್ಲಾ ಭಾಗಗಳಲ್ಲಿಯೂ ನೋಡಬಹುದು (ಧರ್ಮೋ 32:4; ಕೀರ್ತನೆ 9:16; 11:7; 89:14; 111:7; ಜ್ಞಾನೋ 29:26; ಯೆಶಾಯ 30:18; ದಾನಿ 4:37; ರೋಮಾ 3:26; ಪ್ರಕ 15:3;

16:5-7). ದುಷ್ಟರು ಒಂದುವೇಳೆ ಪಶ್ಚಾತ್ತಾಪಪಡಲು ನಿರಾಕರಿಸಿದರೆ ದೇವರು ಅವರನ್ನು ಶಿಕ್ಷಿಸುತ್ತಾನೆ ಮತ್ತು ಆತನ ರಾಜ್ಯದ ನಿಮಿತ್ತ ಕಷ್ಟಗಳನ್ನನುಭವಿಸುವವರಿಗೆ (ವ 7) ನಿತ್ಯಜೀವವನ್ನು ಕೊಡುತ್ತಾನೆ, ಹೀಗೆ ಇಬ್ಬರಿಗೂ ನ್ಯಾಯವನ್ನು ತೀರಿಸುತ್ತಾನೆ. ರೋಮಾ 2:6-11 ರೊಂದಿಗೆ ಹೋಲಿಸಿ ನೋಡಿರಿ. **7**

**1:7** *"ಕರ್ತನಾದ ಯೇಸು ಕ್ರಿಸ್ತನು ಪ್ರತ್ಯಕ್ಷನಾಗುವಾಗ"*– ದೇವರು ಕೆಲವೊಮ್ಮೆ ಜನರ ಮೇಲೆ ಪ್ರತೀಕಾರ ತೀರಿಸಿಕೊಳ್ಳುತ್ತಾನೆ ಮತ್ತು ವಿಶ್ವಾಸಿಗಳನ್ನು ಇಲ್ಲಿ ಹಾಗೂ ಈಗ ಕಾಪಾಡುತ್ತಾನೆ, ಆದರೆ ಬಹುತೇಕ ವಿಚಾರಗಲು ಈ ಯುಗದ ಅಂತ್ಯಕ್ಕೆ ಅಂದರೆ ಯೇಸು ಕ್ರಿಸ್ತನ ಬರೋಣದ ಸಮಯದಲ್ಲಿ ಬಗೆಹರಿಯುತ್ತವೆ. ಆಗ ಎಲ್ಲಾ ಕಾರ್ಯಗಳನ್ನು ಸರಿಪಡಿಸಲಾಗುವದು ಮತ್ತು ಪರಿಪೂರ್ಣವಾದ ನ್ಯಾಯವು ನೆಲೆಸುವದು ಹಾಗೂ ಎಲ್ಲಾ ಮಾನವರಿಗೂ ನ್ಯಾಯವು ನೆಲೆಯಾಗಿರುವದು ಗೊತ್ತಾಗುವದು.

*"ತೋರ್ಪಡಿಸುವ"*– ಕರ್ತನಾದ ಯೇಸು ಕ್ರಿಸ್ತನು ದುಷ್ಟರನ್ನು ಶಿಕ್ಷಿಸಲು ಬರುವಾಗ ಆತನ ಸಭೆಯಲ್ಲಿರುವ ದೇವಜನರಿಗೆ ಉಪಶಮನವು ದೊರೆಯುವದೇ ಹೊರತು ಅದಕ್ಕಿಂತ ಮೊದಲು ದೊರೆಯುವದಿಲ್ಲ ಎಂದು ಪೌಲನು ಹೇಳುದ್ದಾನೆ. ಮತ್ತಾಯ 24:29-30; 1 ಕೊರಿಂಥ 1:7; ತೀತ 2:13 ರೊಂದಿಗೆ ಹೋಲಿಸಿ ನೋಡಿರಿ.

*"ದೇವದೂತರು"*– ಮತ್ತಾಯ 24:31; ಯೂದ 14. **8**

**1:8** *"ಬೆಂಕಿ"*– ಇಬ್ರಿ 10:27; 12:29; 2 ಪೇತ್ರ 3:7; ಪ್ರಕ 19:11-16; ಯೆಶಾಯ 66:15; 30:27; 24:6.

*"ಪ್ರತೀಕಾರ"*– ದೇವರು ಜನರನ್ನು ಶಿಕ್ಷಿಸುವದರಲ್ಲಿ ಸಂತೋಷಿಸುವದಿಲ್ಲ. ಯೆಹೆಜ್ಕೇಲ 18:23,30-32; ಯೋವೇಲ 2:13; 2 ಪೇತ್ರ 3:9 ನೋಡಿರಿ. ಆದರೆ ಜನರು ಪಶ್ಚಾತ್ತಾಪಪಡಲು ನಿರಾಕರಿಸಿ, ಪಾಪದಲ್ಲಿ ಮುಂದುವರೆಯುವಾಗ, ನೀತಿವಂತನಾದ ದೇವರು ಅವರನ್ನು ಖಂಡಿತವಾಗಿಯೂ ಶಿಕ್ಷಿಸುವನು. ವಿಮೋ 34:6-7; ನಹೂ 1:3 ರೊಂದಿಗೆ ಹೋಲಿಸಿ ನೋಡಿರಿ. ಒಂದುವೇಳೆ ದೇವರು ಅಪರಾಧಿಗಳನ್ನು ಶಿಕ್ಷಿಸದೆ ಬಿಟ್ಟರೆ ಆತನು ನೀತಿವಂತನಾಗುವದಿಲ್ಲ ಮತ್ತು ಇಡೀ ಲೋಕವು ನೈತಿಕ ಕ್ರಮವಿಲ್ಲದೆ ಗೊಂದಲದಿಂದ ತುಂಬಿರುತ್ತದೆ.

*"ದೇವರನ್ನರಿಯದವರು"*– ಸಾಮಾನ್ಯವಾಗಿ ಜನರಿಗೆ ಒಬ್ಬನೇ ಸತ್ಯನಾದ ದೇವರ ಬಗ್ಗೆ ಗೊತ್ತಿಲ್ಲ ಯಾಕಂದರೆ ಆತನನ್ನು ತಿಳಿಯಬೇಕೆಂಬ ಬಯಕೆಯೇ ಅವರಿಗಿಲ್ಲ ಮತ್ತು ಆತನನ್ನು ತಿಳಿಯಪಡಿಸಲು ಯಾರಾದರು ಬಂದರೂ ಅವರು ಅವರನ್ನು ನಿರಾಕರಿಸುತ್ತಾರೆ. ಅವರು ದೇವರ ಅನ್ಯೋನ್ಯತೆಗೆ ತಮ್ಮ ಪಾಪವನ್ನು ಸೂಚಿಸುತ್ತಾರೆ. ಯೋಹಾನ 3:19-20; ರೋಮಾ 1:18-25; ಎಫೆ 4:17-19 ರೊಂದಿಗೆ ಹೋಲಿಸಿ ನೋಡಿರಿ.

*"ಸುವಾರ್ತೆಗೆ ಒಳಪಡದವರು"*– ಇದು ಖಂಡಿತವಾಗಿಯೂ ಸುವಾರ್ತೆಯನ್ನು ಕೇಳಿ ಅದನ್ನು

ನಿರಾಕರಿಸುವವರನ್ನು ಸೂಚಿಸುತ್ತದೆ. ಅವರು ಯಾವುದನ್ನು ತಪ್ಪಾಗಿ ತಮ್ಮ ಸ್ವಾತಂತ್ರ್ಯವೆಂದು ಅಂದುಕೊಂಡಿದ್ದಾರೋ ಅದನ್ನು ಬಯಸುತ್ತಾರೆಯೇ ಹೊರತು ಯೇಸು ಕ್ರಿಸ್ತನಿಗೆ ವಿಧೇಯರಾಗುವದನ್ನು ಬಯಸುವದಿಲ್ಲ. ಕರ್ತನಾದ ಯೇಸು ಕ್ರಿಸ್ತನ ಸುವಾರ್ತೆಗೆ ವಿಧೇಯರಾಗಬೇಕೇ ಹೊರತು ಸುಮ್ಮನೇ ನಂಬಬಾರದು ಎಂಬದಾಗಿ ಹೇಳಿರುವದನ್ನು ಗಮನಿಸಿರಿ. ಮತ್ತಾಯ 7:21,24; ಅಪೊ 5:32; ರೋಮಾ 6:17; ಇಬ್ರಿ 5:9; 1 ಪೇತ್ರ 1:22; 4:17 ರೊಂದಿಗೆ ಹೋಲಿಸಿ ನೋಡಿರಿ. ನಿಜವಾಗಿ ಹೇಳುವದಾದರೆ ಸತ್ಯವಾಗಿ ಸುವಾರ್ತೆಯನ್ನು ನಂಬುವದಾದರೆ ಅದಕ್ಕೆ ವಿಧೇಯರಾಗಲು ಸಾಧ್ಯವಾಗುತ್ತದೆ. ನಂಬುವದು ಮತ್ತು ವಿಧೇಯತೆ ಒಂದಕ್ಕೊಂದು ಹೊಂದಿಕೆಯಾಗಿವೆ ಅವುಗಳನ್ನು ಬೇರ್ಪಡಿಸಲು ಆಗುವದಿಲ್ಲ. ಯಾಕೋಬ 2:14-26 ರೊಂದಿಗೆ ಹೋಲಿಸಿ ನೋಡಿರಿ. ನಂಬಿಕೆ ತಟಸ್ಥವಾಗಿರುವ ಸಂಗತಿಯಲ್ಲ. ಅಪೊ 22:10; ಇಬ್ರಿ 11:4 ರ ನೋಟ್ಸ್ ನೋಡಿರಿ. **9**

**1:9** *"ನಿತ್ಯವಾದ ನಾಶನ"*– 2:3; ಮತ್ತಾಯ 7:13; ರೋಮಾ 9:22; ಗಲಾ 6:8; ಫಿಲಿಪ್ಪಿ 3:19; 1 ಥೆಸ 5:3; 1 ತಿಮೊ 6:9; 2 ಪೇತ್ರ 3:7,12,16; ಪ್ರಕ 17:8,11. ನಾಶನ ಎಂದರೆ ಸಂಪೂರ್ಣ ವಿನಾಶ, ಎರಡನೇ ಮರಣ (ಪ್ರಕ 2:18). ಅಂಥ ಜನರ ಅಸ್ತಿತ್ವವು ಕೊನೆಯಾಗುವದೆಂದು ಸತ್ಯವೇದವು ಹೇಳುವದಿಲ್ಲ. ಮತ್ತಾಯ 25:46; ಲೂಕ 16:26 ರೊಂದಿಗೆ ಹೋಲಿಸಿ ನೋಡಿರಿ.

*"ಕರ್ತನ ಪ್ರಸನ್ನತೆಯಿಂದ"*– ಮತ್ತಾಯ 7:23; 25:41; ಪ್ರಕ 22:15-16 ರೊಂದಿಗೆ ಹೋಲಿಸಿ ನೋಡಿರಿ. ಅವರ ನಾಶನದ ಅರ್ಥ ಇದುವೇ ಆಗಿದೆ. ಆಶೀರ್ವಾದ, ಸಂತೋಷ ಮತ್ತು ಸಮಾಧಾನದ ಮೂಲ ಕಾರಣನಾಗಿರುವ ದೇವರಿಂದ ಅವರು ಸಂಪೂರ್ಣವಾಗಿ ದೂರಾಗುವರು. ಅವರು ಇದನ್ನೇ ತಮ್ಮ ಜೀವಿತದ ಸಮಯದಲ್ಲಿ ಆರಿಸಿಕೊಳ್ಳುವರು (ವ 8), ಮತ್ತು ಅವರಿಗೆ ಇದುವೇ ಸಿಗುವದಾಗಿದೆ. ಇದು ಪರಿಪೂರ್ಣವಾದ ನ್ಯಾಯವಾಗಿದ್ದು ಅವರು ಶಿಕ್ಷೆಯನ್ನು ಅನುಭವಿಸಲೇ ಬೇಕಾಗಿದೆ.

*"ಆತನ ಶಕ್ತಿಯ ಪ್ರಭಾವ"*– ಯೆಶಾಯ 2:10-11,19,21. **10**

**1:10** *"ಪ್ರಭಾವ ಹೊಂದಿದವನು"*– ಯೋಹಾನ 17:10; ಎಫೆ 1:12,14.

*"ದೇವಜನರು"*– ಕ್ರಿಸ್ತನಲ್ಲಿಯೇ ನಿಜವಾದ ಎಲ್ಲಾ ವಿಶ್ವಾಸಿಗಳು (ರೋಮಾ 1:7; 1 ಪೇತ್ರ 2:9).

*"ಆಶ್ಚರ್ಯ ಹುಟ್ಟಿಸುವದು"*– ನಾವು ಆತನು ಇರುವ ಹಾಗೆಯೇ ಆತನನ್ನು ನೋಡುವಾಗ ನಮಗೆ ಎಂಥಾ ಆಶ್ಚರ್ಯ ಎದುರಾಗುತ್ತದೆ.

*"ಎಲ್ಲಾ ವಿಶ್ವಾಸಿಗಳ ನಡುವೆ"*– ಆತನಲ್ಲಿ ನಂಬಿಕೆಯನ್ನಿಡುವವರಲ್ಲಿ ಯೇಸು ಕ್ರಿಸ್ತನು ಪ್ರಭಾವ ಹೊಂದುವನು ಮತ್ತು ಅವರು ಮಾತ್ರವೇ ಆತನ ಪ್ರಭಾವದಲ್ಲಿ ಪಾಲು ಹೊಂದುವರು. ಉಳಿದವರೆಲ್ಲರೂ ತಮ್ಮ ಅಪನಂಬಿಕೆ ಮತ್ತು ಸ್ವಭಾವದ ಮೂಲಕ

ಆತನನ್ನು ಸತತವಾಗಿ ಅಗೌರವಿಸುವವರಾಗಿರುವರು.

*“ನಾವು ನಿಮಗೆ ಹೇಳಿದ ಸಾಕ್ಷಿಯನ್ನು ನಂಬಿದವರು”*– 1 ಥೆಸ 1:7-10.

*“ಆ ದಿನದಲ್ಲಿ”*– 1 ಥೆಸ 5:2; ಯೆಶಾಯ 2:12 ರೊಂದಿಗೆ ಹೋಲಿಸಿ ನೋಡಿರಿ. **11**

**1:11** *“ನಾವು ಯಾವಾಗಲೂ ಪ್ರಾರ್ಥನೆ ಮಾಡುತ್ತಾ ಇದ್ದೇವೆ”*– ರೋಮಾ 1:8-9; ಎಫೆ 1:16; 3:16; ಫಿಲಿಪ್ಪಿ 1:4,9; ಕೊಲೊ 1:3,9,21; 1 ಥೆಸ 1:2; 3:10.

*“ಯೋಗ್ಯರು”*– ವ 5; ಎಫೆ 4:1; ಫಿಲಿಪ್ಪಿ 1:27; ಕೊಲೊ 1:10; 1 ಥೆಸ 2:12.

*“ಈ ಕರೆಯುವಿಕೆ”*– ಎಫೆ 4:1; ರೋಮಾ 1:6; 8:30 ನೋಡಿರಿ.

*“ಮತ್ತು ಶಕ್ತಿಯಿಂದ . . . ನೆರವೇರುತ್ತದೆ”*– ಕೀರ್ತನೆ 90:17; ಯೆಶಾಯ 26:12 ರೊಂದಿಗೆ ಹೋಲಿಸಿ ನೋಡಿರಿ. ಆತನು ನಮ್ಮಲ್ಲಿ ಕಾರ್ಯಮಾಡುತ್ತಾ ಇರುವದರಿಂದ ನಾವು ನಂಬಿಕೆಯ ಯಾವುದೇ ಕಾರ್ಯವನ್ನು ನೆರವೇರಿಸಲು ಶಕ್ತರಾಗಿದ್ದೇವೆ – ಫಿಲಿಪ್ಪಿ 2:13; ಎಫೆ 2:10. **12**

**1:12** *“ಹೆಸರು”*– ಕ್ರೈಸ್ತರು ಲೋಕದ ಎದುರಿನಲ್ಲಿ ಯೇಸು ಕ್ರಿಸ್ತನ ನಾಮವನ್ನು ವ್ಯಕ್ತಪಡಿಸುವವರಾಗಿದ್ದಾರೆ (1 ಪೇತ್ರ 4:16).

*“ನಿಮ್ಮಲ್ಲಿ ಮಹಿಮೆಹೊಂದಿದ್ದಾನೆ”*– ಯೇಸು ಕ್ರಿಸ್ತನು ಬರುವಾಗ ಇದು ಸಂಭವಿಸುತ್ತದೆ (ವ 10); ಅದು ಈಗಲೂ ಸಂಭವಿಸಬೇಕು – 1 ಕೊರಿಂಥ 6:20; 10:31; ಕೊಲೊ 3:17; 1 ಪೇತ್ರ 4:11.

*“ನೀವೂ ಆತನಲ್ಲಿ”*– ಕರ್ತನಾದ ಯೇಸು ಕ್ರಿಸ್ತನು ಯಾರಲ್ಲಿ ಮಹಿಮೆ ಹೊಂದುತ್ತಾನೋ, ಆತನು ತನ್ನಲ್ಲಿಯೂ ಮಹಿಮೆ ಹೊಂದುತ್ತಾನೆ. ಯೋಹಾನ 17:10,22; ರೋಮಾ 8:30 ರೊಂದಿಗೆ ಹೋಲಿಸಿ ನೋಡಿರಿ.

*“ಕೃಪೆ”*– ವಿಶ್ವಾಸಿಗಳ ರಕ್ಷಣೆ ಮತ್ತು ಅವರ ಆಶೀರ್ವಾದಗಳಿಗೆ ಸಂಬಂಧಿಸಿರುವ ವಿಷಯಗಳೆಲ್ಲವೂ ಕೃಪೆಯಿಂದಲೇ ಆಗಿವೆ (ರೋಮಾ 6:23; ಎಫೆ 2:8-9). ಈ ವಾಕ್ಯದ ಕಡೆಯ ಸಾಲನ್ನು “ನಮ್ಮ ದೇವರು ಮತ್ತು ಕರ್ತನಾಗಿರುವ ಯೇಸು ಕ್ರಿಸ್ತನು” ಎಂಬದಾಗಿಯೂ ಭಾಷಾಂತರ ಮಾಡಬಹುದು. ಗ್ರೀಕ್ ನಲ್ಲಿ “ದ” ಎಂಬದಕ್ಕೆ ಯಾವುದೇ ಪದವಿಲ್ಲ.

# 2 1

**2:1** *“ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆ”*– 1:7; ಅಪೊ 1:11.

*“ನಾವು ಆತನ ಬಳಿಯಲ್ಲಿ ಕೂಡುಕೊಳ್ಳುವದು”*– 1 ಥೆಸ 4:17; ಯೋಹಾನ 14:3; ಮತ್ತಾಯ 24:31 ರೊಂದಿಗೆ ಹೋಲಿಸಿ ನೋಡಿರಿ. ಕೆಲವೊಮ್ಮೆ ಈ ಘಟನೆಯನ್ನು “ಎತ್ತಲ್ಪಡುವಿಕೆ” (ಸಾಗಿಸುವಿಕೆ ಅಥವಾ ಒಯ್ಯಲ್ಪಡುವಿಕೆ ಎಂಬ ಅರ್ಥವಿರುವ ಲ್ಯಾಟಿನ್ ಪದ) ಎಂದು ಕರೆಯಲಾಗುತ್ತದೆ. **2**

**2:2** *“ಪೌಲನು ಹಾಗೆ ಬರೆದನೆಂದಾಗಲಿ”*– ಈ ವಿಶ್ವಾಸಿಗಳಿಗೆ ಯಾರು ಎಚ್ಚರಿಕೆಯ ಧ್ವನಿಯನ್ನು ಕೊಡುತ್ತಾ ಇದ್ದರು ಎಂದು ಗೊತ್ತಿಲ್ಲ, ಆದರೆ ಬಹುಶಃ ಅವನು ಸುಳ್ಳು ಬೋಧಕರು ತಾವೇ ಪತ್ರವನ್ನು ಬರೆದು ಪೌಲನು ಅದನ್ನು ಬರೆದಿದ್ದಾನೆ ಎಂದು ಹೇಳಲು ಅಥವಾ ಅವರನ್ನು ನಿರಾಸೆಗೊಳಿಸಲು ಬೇರೆ ತಂತ್ರಗಳನ್ನು ಉಪಯೋಗಿಸಲು ಹಿಂಜರಿಯುವದಿಲ್ಲ ಎಂಬದಾಗಿ (ಅವನು ನೆನೆಸಿದನು) ಅನ್ನಿಸುತ್ತದೆ ಎಂಬದು ಅವನ ಮಾತಿನ ಅರ್ಥವಾಗಿದೆ. ಪೌಲನು ಇತರೆ ಪತ್ರಿಕೆಗಳಲ್ಲಿ – ರೋಮಾ 16:17-18; 2 ಕೊರಿಂಥ 11:13-15 ಅವರ ಬಗ್ಗೆ ಕೊಟ್ಟಿರುವ ವಿವರಣೆಯಿಂದ ಅಂಥ ಬೋಧಕರ ಗುಣಗಳನ್ನು ನಾವು ತಿಳಿಯಬಹುದಾಗಿದೆ. ಸತ್ಯದ ವೈರಿಗಳು ಹೋರಾಟ ಮಾಡುವಾಗ ನೈತಿಕರಾಗಿರುತ್ತಾರೆ ಎಂಬದನ್ನು ನಿರೀಕ್ಷಿಸಲು ನಮಗೆ ಯಾವುದೇ ಕಾರಣಗಳಿಲ್ಲ.

*“ಕರ್ತನ ದಿನ”*– ಫಿಲಿಪ್ಪಿ 1:10; 2:16. ಇದರ ಅರ್ಥ ಯೇಸು ಕ್ರಿಸ್ತನ ದಿನ ಬರುತ್ತಾ ಇದೆ ಎಂಬದಾಗಿದೆ. 1 ಕೊರಿಂಥ 1:8 ರಲ್ಲಿ ಇದನ್ನು “ನಮ್ಮ ಕರ್ತನಾದ ಯೇಸು ಕ್ರಿಸ್ತನ ದಿನ” ಎಂದು ಕರೆಯಲಾಗಿದೆ. ಅ ದಿನ “ಕರ್ತನ ದಿನ” ಪ್ರಾರಂಭವಾಗುವ ಸಮಯದಲ್ಲಿ ಬರುತ್ತದೆ (1 ಥೆಸ 5:2). ಕೆಲವು ವ್ಯಾಖ್ಯಾನಕಾರರು ಹೇಳುವದೇನೆಂದರೆ ಎತ್ತಲ್ಪಡುವಿಕೆಯಾಗುವದಕ್ಕಿಂತ (1 ಥೆಸ 4:16-17) ಕೆಲವು ವರ್ಷಗಳ ಮುಂಚೆ ಸಂಭವಿಸುತ್ತದೆ, ಆದರೆ ಪೌಲನು ಹೀಗೆ ಎಲ್ಲಿಯೂ ಹೇಳಿಲ್ಲ. ಕರ್ತನ ದಿನ ಈಗಾಗಲೇ ಬಂದಿದೆ ಎಂದು ಥೆಸಲೋನಿಕದಲ್ಲಿರುವ ವಿಶ್ವಾಸಿಗಳು ಅಂದುಕೊಳ್ಳಬಾರದು – ಯೇಸು ಕ್ರಿಸ್ತನ ಬರೋಣದ ವಿಷಯವಾಗಿ ಅವನು ಕೊಟ್ಟಿರುವ ಬೋಧನೆಯನ್ನು ಅವನು ತಪ್ಪಾಗಿ ಮಾಡಿದ್ದಾನೆಂದು ಯಾರೂ ತಿಳಿದುಕೊಳ್ಳಬಾರದೆಂದು ಪೌಲನು ಬಯಸಿದನು. ಒಂದುವೇಳೆ ಇದರ ವಿಷಯದಲ್ಲಿ ಅವನು ತಪ್ಪು ಮಾಡಿದ್ದಾನೆಂದು ಅವರು ತಿಳಿದುಕೊಂಡರೆ, ಸುವಾರ್ತೆ ಮತ್ತು ಅವರಿಗೆ ಮಾಡಿದ ಇತರೆ ಎಲ್ಲಾ ಬೋಧನೆಗಳ ವಿಷಯದಲ್ಲಿಯೂ ತಪ್ಪು ಮಾಡಿದ್ದಾನೆಂದು ಅವರು ತಿಳಿಯುವರು. ಹೀಗೇನಾದರೂ ಆದರೆ ಅದರ ಫಲಿತಾಂಶವು ಬಹಳ ಹೀನಾಯವಾಗಿರುವವು. **3**

**2:3** *“ನಿಮ್ಮನ್ನು ಯಾರೂ ಮೋಸಗೊಳಿಸದಿರಲಿ”*– ವಿಶ್ವಾಸಿಗಳನ್ನು ಸತ್ಯವೇದಾನುಸಾರವಾದ ಸತ್ಯ ಅಥವಾ ಬೇರೆ ವಿಷಯಗಳಿಂದ ತಪ್ಪಿಸಲು ಪ್ರಯತ್ನಿಸುವಂಥ ವಂಚಕರು ಯಾವಾಗಲೂ ಇರುವರು. ಮತ್ತಾಯ 24:4; ರೋಮಾ 16:18; ಎಫೆ 5:6; ಕೊಲೊ 2:4 ರೊಂದಿಗೆ ಹೋಲಿಸಿ ನೋಡಿರಿ. ನಾವು ದೇವರ ವಾಕ್ಯವನ್ನು ತಿಳಿದುಕೊಳ್ಳಬೇಕು ಮತ್ತು ಯಾವಾಗಲೂ ಎಚ್ಚರಿಕೆಯುಳ್ಳವರಾಗಿರಬೇಕು.

*“ಬಂದ ಹೊರತು”*– ಯೇಸು ಕ್ರಿಸ್ತನ ದಿನ (ಅಥವಾ ಕರ್ತನ ದಿನ) ಬರುವದಕ್ಕಿಂತ ಮೊದಲು ಸಂಭವಿಸುವ ಘಟನೆಯ ಬಗ್ಗೆ ಪೌಲನು ಈಗ ಮಾತನಾಡುತ್ತಾ ಇದ್ದಾನೆ. ಆ ಘಟನೆ ಸಭೆಯ ಎತ್ತಲ್ಪಡುವಿಕೆ ಎಂದು ಅವನು ಹೇಳದೆ ಇರುವದನ್ನು ಗಮನಿಸಿರಿ. ಅವನು ಒಂದುವೇಳೆ ಕರ್ತನ ದಿನ ಪ್ರಾರಂಭವಾಗುವ ಮೊದಲು ಎತ್ತಲ್ಪಡುವಿಕೆಯಾಗುತ್ತದೆ ಎಂದು

ನಂಬುವದಾದರೆ, ಈ ಸಮಯ ಅದನ್ನು ಹೇಳಲು ಯುಕ್ತವಾಗಿತ್ತು, ಆದರೆ ಅವನು ಹಾಗೆ ಹೇಳಿಲ್ಲ. ಬದಲಾಗಿ ಅವನು "ಮತಭ್ರಷ್ಟತೆಯ" ಬಗ್ಗೆ ಹೇಳಿದ್ದಾನೆ. ಇದರ ಗ್ರೀಕ್ ಪದದ ಅರ್ಥ "ಎದುರುಬೀಳುವಿಕೆ" ಅಥವಾ "ಅಲ್ಲಗಳೆಯುವಿಕೆ" ಅಥವಾ "ಮತಭ್ರಷ್ಟತೆ". ಸಾಮಾನ್ಯವಾಗಿ ಮತಭ್ರಷ್ಟತೆ ಎಂದರೆ ಒಬ್ಬನು ತನ್ನ ಮತದಿಂದ ಹೊರಗೆ ಹೋಗುವದು ಅಥವಾ ಒಬ್ಬನು ತನ್ನ ಧರ್ಮದ ತತ್ವಗಳನ್ನು ಅಲ್ಲಗಳೆಯುವದು. ಸತ್ಯವೇದದ ದೃಷ್ಟಿಕೋನದ ಪ್ರಕಾರ ಮತಭ್ರಷ್ಟತೆ ಎಂದರೆ ದೇವರಿಗೆ ವಿರುದ್ಧವಾಗಿ ತಿರುಗಿ ಬೀಳುವದು ಮತ್ತು ಯೇಸು ಕ್ರಿಸ್ತನ ಸತ್ಯದಿಂದ ದೂರ ಹೋಗುವದು. ಮೊದಲನೆಯ ಮಾನವನು ಪಾಪಕ್ಕೆ ಒಳಗಾದ್ದರಿಂದ (ಆದಿಕಾಂಡ 3ನೇ ಅಧ್ಯಾಯ) ಮಾನವಕುಲವು ಸಾಮಾನ್ಯವಾಗಿ ಯಾವಾಗಲೂ ದೇವರಿಗೆ ವಿರುದ್ಧವಾಗಿದೆ, ಯಾವಾಗಲೂ ಆತನಿಂದ ದೂರಹೋಗಲು ಬಯಸುತ್ತದೆ. ಈ ವಿಷಯದಲ್ಲಿ ದೇವರ ಸ್ವಂತ ಜನರಾದ ಇಸ್ರಾಯೇಲ್ಯರು ಎಲ್ಲಾ ಜನಗಳ ಪ್ರತಿನಿಧಿಗಳಾಗಿದ್ದಾರೆ. ಧರ್ಮೋ 9:7,24; ಕೀರ್ತನೆ 106:43; ಯೆಶಾಯ 1:2; ಯೆರೆ 6:28 ನೋಡಿರಿ. ಎಲ್ಲಾ ರೀತಿಯ ಪಾಪಗಳು ಎದುರುಬೀಳುವಿಕೆಯ ಪುರಾವೆಯಾಗಿವೆ (1 ಯೋಹಾನ 3:4 ನೋಡಿರಿ). ಆದರೆ ಪೌಲನು ಈ ಯುಗದ ಕೊನೆಯಲ್ಲಿ ಉಂಟಾಗುವ ಅಂತಿಮವಾದ ಮಹಾ ಎದುರುಬೀಳುವಿಕೆ ಅಥವಾ ನಿರ್ಗಮನ ಅಥವಾ ಮತಭ್ರಷ್ಟತೆಯ ಬಗ್ಗೆ ಥೆಸಲೋನಿಕದವರಿಗೆ ಬರೆದಿದ್ದಾನೆ. ಅದು ಅಮೋಘವಾದದ್ದಾಗಿರುತ್ತದೆ. ಭೂಲೋಕದ ಎಲ್ಲಾ ಧರ್ಮಗಳು ಮತ್ತು ಜನಗಳ (ಮತಭ್ರಷ್ಟರಾಗಿರುವ ಕ್ರೈಸ್ತರು) ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ – ವ 4; ಮತ್ತಾಯ 24:10-25; 2 ತಿಮೊ 3:1-5; ಪ್ರಕ 13:4,8,13-15.

"*ನಾಶಕ್ಕೆ ಅಧೀನನಾದ ಪುರುಷನು*"– ಈ ದಂಗೆಯು ಅತ್ಯಂತ ಪಾಪಿಯಾದ ವ್ಯಕ್ತಿಯಿಂದ ಮುನ್ನಡೆಸಲ್ಪಡುವದು, ಅವನು ಎದುರುಬೀಳುವಿಕೆ ಮತ್ತು ದುಷ್ಟತನದ ಸಾಕಾರವಾಗಿರುವನು. ಇದುವೇ ಅಂತ್ಯಕ್ರಿಸ್ತನ ಬರೋಣವಾಗಿದೆ – 1 ಯೋಹಾನ 2:18.

"*ಅಧಃಪತನದ ಕುಮಾರನು*"– ಯೋಹಾನ 17:12 ರೊಂದಿಗೆ ಹೋಲಿಸಿ ನೋಡಿರಿ. ಇದರ ಅರ್ಥ ನಾಶನಕ್ಕೆ ಹತ್ತಿರ ಬಂಧಿಸಲ್ಪಟ್ಟಿರುವವನು, ವಿನಾಶಕ್ಕೆ ಗುರಿಯಾಗುವವನು ಎಂಬದಾಗಿದೆ. **4**

**2:4** "*ನಾಶಕ್ಕೆ ಅಧೀನನಾದ ಪುರುಷನು*"–ಅತ್ಯಂತ ಅಸಧಾರಣನಾದ ರಾಜಕೀಯ ಮತ್ತು ಸೈನ್ಯದ ನಾಯಕನಾಗಿರುವನು, ಆದರೆ ತಾನು ಒಳ್ಳೆಯವನೆಂದು ಅವನು ಹೇಳಿಕೊಳ್ಳುವನು ಮತ್ತು ಭೂಮಿಯ ಮೇಲಿರುವ ಎಲ್ಲರಿಂದಲೂ ಆರಾಧನೆಯನ್ನು ಬಯಸುವನು – ಪ್ರಕ 13:1-8,15. ದೇವರ ನಿಯಮಗಳು ಅಥವಾ ಮಾನವರ ನಿಯಮಗಳಿಗೆ ಅವನು ಯಾವುದೇ ಬೆಲೆ ಕೊಡುವದಿಲ್ಲ. ಅವನು ತನ್ನ ಗುಣಲಕ್ಷಣಗಳಲ್ಲಿ ಯೇಸು ಕ್ರಿಸ್ತನಲ್ಲಿ ಸಂಪೂರ್ಣವಾಗಿ ವಿರುದ್ಧವಾಗಿರುವನು (ಇಬ್ರಿ 10:7; ಕೀರ್ತನೆ 40:8). ಲೋಕದವರಿಗೆ ಯೇಸು ಕ್ರಿಸ್ತನು ಬೇಡ,

ಆದ್ದರಿಂದ ಅವರು ಕ್ರಿಸ್ತವಿರೋಧಿಯನ್ನು ಬಯಸುವರು. ಅವರಿಗೆ ದೇವರ ಉನ್ನತವಾದ ನಿಯಮಗಳು ಬೇಡ, ಆದ್ದರಿಂದ ಅವರು ಅಧರ್ಮ ಸ್ವರೂಪನನ್ನು ಬಯಸುವರು.

*"ತನ್ನನ್ನು ತಾನೇ ಹೆಚ್ಚಿಸಿಕೊಳ್ಳುವನು"*– ದಾನಿ 7:8,11,20,25; ಪ್ರಕ 13:5-6 ರೊಂದಿಗೆ ಹೋಲಿಸಿ ನೋಡಿರಿ.

*"ದೇವರ ಗರ್ಭಗುಡಿ"*– ನಿಜವಾದ ದೇವರ ಆರಾಧನೆಗೆಂದು ಪ್ರತಿಷ್ಠೆಗೊಂಡಿರುವ ಕಟ್ಟಡ. ಮತ್ತಾಯ 24:15; ಮಾರ್ಕ 13:14 ರೊಂದಿಗೆ ಹೋಲಿಸಿ ನೋಡಿರಿ.

*"ತನ್ನನ್ನು ದೇವರೆಂದು ಹೇಳಿಕೊಳ್ಳುವನು"*– ಇದು ಕಟ್ಟಕಡೆಯ ಪಾಪವಾಗಿದೆ. ಸತ್ಯವೇದದ ಪ್ರಕಾರ ಯಾವನೇ ವ್ಯಕ್ತಿಯಾದರೂ ತನ್ನನ್ನು ದೇವರೆಂದು ಹೇಳಿಕೊಳ್ಳುವದು ಅತ್ಯಂತ ಘೋರವಾದ ದೇವದೂಷಣೆಯಾಗಿದೆ. ಯೋಹಾನ 5:18; 10:31-33; ಮತ್ತಾಯ 26:64-65 ರ ನೋಟ್ಸ್ ನೋಡಿರಿ. ಎದುರುಬೀಳುವಿಕೆಯ ಸಾಕಾರ ಮತ್ತು ದುಷ್ಟನು ಇದನ್ನು ಹೇಳಬೇಕಾದರೆ – ಇದು ವೃದ್ಧಿಯಾಗಿರುವ ದುಷ್ಟತನದ ಕಟ್ಟಕಡೆಯ ಹಂತವಾಗಿದೆ. ದೇವರು ಸರ್ವಶಕ್ತನಾದ ಸೃಷ್ಟಿಕರ್ತನು; ಮಾನವರೆಲ್ಲರೂ ದೇವರು ನಿರ್ಮಿಸಿರುವ ಜೀವಿಗಳಾಗಿದ್ದಾರೆ. ದೇವರು ಸಂಪೂರ್ಣವಾಗಿ ಪರಿಶುದ್ಧನಾಗಿದ್ದಾನೆ; ಮಾನವರೆಲ್ಲರೂ ಪಾಪಿಗಳಾಗಿದ್ದಾರೆ. ಆದಿ 8:21; ಯಾಜಕ 20:7; ಯೆಶಾಯ 6:3; ರೋಮಾ 3:9-23; 1 ಪೇತ್ರ 1:15-16 ನೋಡಿರಿ. **5**

**2:5** *"ನಾನು ನಿಮ್ಮ ಸಂಗಡ ಇದ್ದಾಗ"*– ಪೌಲನು ಅವರೊಂದಿಗೆ ಅತ್ಯಂತ ಕ್ಲುಪ್ತ ಸಮಯ ಮಾತ್ರವೇ ಇದ್ದನು (ಅಪೊ 17:1-10), ಆದರೆ ಮುಂಬರುವ ಅಂತ್ಯಕ್ರಿಸ್ತನ ಕುರಿತಾದ ಬೋಧನೆಯು ಅತ್ಯಂತ ಪ್ರಾಮುಖ್ಯವಾಗಿದೆ ಎಂದು ಅವನು ಯೋಚಿಸಿದ್ದರಿಂದ ಅದರ ಬಗ್ಗೆ ಅವರಿಗೆ ಸೂಚನೆಗಳನ್ನು ಕೊಟ್ಟಿದ್ದಾನೆ. **6-7**

**2:6-7** ಅವನ ಪ್ರತ್ಯಕ್ಷತೆಗೆ ದೇವರು ನೇಮಿಸಿರುವ ಸಮಯವು ಬರುವ ತನಕ ಕ್ರಿಸ್ತ ವಿರೋಧಿ ಕಾಣಿಸಿಕೊಳ್ಳದಂತೆ ಯಾವುದೋ ಶಕ್ತಿ ಅಥವಾ ಯಾವನೋ ವ್ಯಕ್ತಿ ಅವನನ್ನು ತಡೆಯುವನು. ಪೌಲನು ಥೆಸಲೋನಿಕದವರಿಗೆ ಆ ಶಕ್ತಿ ಅಥವಾ ವ್ಯಕ್ತಿ ಯಾರು ಎಂದು ಹೇಳಿದನು, ಆದರೆ ಅವನು ತನ್ನ ಮಾತುಗಳನ್ನು ಈ ಪತ್ರಿಕೆಯಲ್ಲಿ ಮತ್ತೆ ಹೇಳಿಲ್ಲ ಆದ್ದರಿಂದ ಅವನ ಮಾತಿನ ಅರ್ಥ ಏನು ಎಂಬದು ನಮಗೆ ಗೊತ್ತಿಲ್ಲ. ಆದದ್ದರಿಂದ ನಾವು ಅದರ ವಿಷಯದಲ್ಲಿ ಊಹೆಯಿಂದ ಮಾತನಾಡಬಾರದು. ಈ ವಿಷಯದ ಬಗ್ಗೆ ಹೆಚ್ಚಿನ ಕುತೂಹಲವಂತೂ ಇದ್ದೇ ಇದೆ. ಪವಿತ್ರಾತ್ಮನು ಕ್ರಿಸ್ತ ವಿರೋಧ ಪ್ರತ್ಯಕ್ಷತೆಯನ್ನು ತಡೆಯುತ್ತಾನೆ ಎಂಬದು ಪೌಲನ ಮಾತುಗಳ ಅರ್ಥವಾಗಿದೆ ಎಂದು ಕೆಲವು ವಿಶ್ವಾಸಿಗಳು ಹೇಳುತ್ತಾರೆ. ಅವರ ದೃಷ್ಟಿಯಲ್ಲಿ "ತೆಗೆದುಬಿಡುವ ತನಕ" ಎಂದರೆ ಸಭೆಯ ಎತ್ತಲ್ಪಡುವಿಕೆ, ಮತ್ತು ಎಲ್ಲಾ ವಿಶ್ವಾಸಿಗಳಲ್ಲಿ ಇರುವ ಪವಿತ್ರಾತ್ಮನು ಅವರೊಂದಿಗೆ ಭೂಲೋಕದಿಂದ ಹೊರಡುವನು. ಆದರೆ ಇದೂ ಊಹೆಯಾಗಿದೆ. ಇಲ್ಲಿ ಪವಿತ್ರಾತ್ಮನು ಅಥವಾ ಸಭೆ ಅಥವಾ ಎತ್ತಲ್ಪಡುವಿಕೆಯ ಬಗ್ಗೆ ಏನೂ ಹೇಳಲಾಗಿಲ್ಲ. ಆದರೂ ಒಂದುವೇಳೆ "ತೆಗೆದುಬಿಡುವ ತನಕ" ಎಂಬದಾಗಿ ಪೌಲನು

ಹೇಳಿರುವದು ಪವಿತ್ರಾತ್ಮನೇ ಆಗಿದ್ದರೆ ಅವಶ್ಯಕವಾಗಿ ಸಭೆಯ ಎತ್ತಲ್ಪಡುವಿಕೆಯ ಬಗ್ಗೆ ಹೇಳುವ ಅವಶ್ಯಕತೆಯಿಲ್ಲ. ಮಹಾಸಂಕಟಕಾಲಕ್ಕೂ ಮೊದಲು ಅಥವಾ ಸಂಕಟಕಾಲದ ಸಮಯದಲ್ಲಿ ಪವಿತ್ರಾತ್ಮನು ನಿರ್ಗಮಿಸುವನು ಎಂಬದಾಗಿ ಪೌಲನು ಸೂಚಿಸಿರುವ ವಿಷಯದಲ್ಲಿ ಇರುವ ಒಂದು ಸಮಸ್ಯೆ ಏನೆಂದರೆ: ಸಂಕಟಕಾಲದ ಸಮಯಾದ್ಯಂತ ಭೂಲೋಕದ ಮೇಲೆ ಕೆಲವು ರೀತಿಯ "ದೇವಜನರು" ಇರುವರು (ಪ್ರಕ 7:9-17; 13:6). ಈಗಲಾದರೋ ವಿಶ್ವಾಸಿಗಳಿಗೆ ಪವಿತ್ರಾತ್ಮನು ಇದ್ದಾನೆ ಆದರೆ ಅವರು ಆಗ ಆತನು ಇಲ್ಲದೆ ಇರುವದು ಹೇಗೆ, ಆ ಸಮಯದಲ್ಲಿಯೇ ಅವರಿಗೆ ಆತನ ಅವಶ್ಯಕತೆ ಹೆಚ್ಚಾಗಿದೆಯಲ್ಲವೇ? "ತೆಗೆದುಹಾಕಲ್ಪಡುವ ತನಕ" ಎಂಬ ಪದದ ಅರ್ಥದಲ್ಲಿಯೂ ಅನಿಶ್ಚಯತೆ ಇದೆ. ಇದು ಗ್ರೀಕ್ ಭಾಷೆಯ ಅಕ್ಷರಾರ್ಥವಾದ ಭಾಷಾಂತರವಲ್ಲ. ಅಕ್ಷರಾರ್ಥವಾಗಿ "ಆತನು ಮಧ್ಯದಿಂದ ಹೊರಗೆ ಹೋಗುವ ತನಕ" ಎಂಬದಾಗಿದೆ. ಆತನು ಪಕ್ಕಕ್ಕೆ ಸರಿಯುವ ತನಕ ಎಂಬ ಅರ್ಥವನ್ನೂ ಕೊಡುತ್ತದೆ. ಖಂಡಿತವಾಗಿಯೂ, ಮೇಲಕ್ಕೆತ್ತುವನು ಎಂಬದನ್ನು ಯಾವುದೇ ಪದದಿಂದ ಇಲ್ಲಿ ಸೂಚಿಸಲಾಗಿಲ್ಲ. ಮಧ್ಯದಿಂದ ಹೊರಗೆ ಹೋಗುವದರಲ್ಲಿ ಯಾವುದನ್ನೂ ಅಥವಾ ಯಾರನ್ನೂ ಸೇರಿಸಲಾಗಿಲ್ಲ ಎಂಬದಕ್ಕೆ ಯಾವುದೇ ಸಲಹೆಯನ್ನು ಕೊಡಲಾಗಿಲ್ಲ. ಹಾಗೆಯೇ ಆತನು ಯಾವುದರ "ಮಧ್ಯದಿಂದ" ಹೊರಡುವನು ಎಂಬದನ್ನೂ ಹೇಳಲಾಗಿಲ್ಲ. ಅಂಥ ಅನುಮಾನಕರ ಪದವನ್ನು ತೆಗೆದುಕೊಳ್ಳುವದು ಮತ್ತು ಊಹೆಯಿಂದ ಅರ್ಥಮಾಡಿಕೊಳ್ಳುವದರ ಅರ್ಥ ಸಭೆಯ ಎತ್ತಲ್ಪಡುವಿಕೆಯು ಖಂಡಿತವಾಗಿಯೂ ಬುದ್ಧಿವಂತ ವ್ಯಾಖ್ಯಾನವೆಂದು ತಿಳಿಸುವದಿಲ್ಲ. ಇನ್ನೂ ಕೆಲವರು ಹೇಳುವದೇನೆಂದರೆ 7 ನೇ ವಚನದಲ್ಲಿ ಪೌಲನು ಯಾವುದೇ ದೂತನ ಬಗ್ಗೆ ಹೇಳುತ್ತಾ ಇದ್ದಾನೆ. ಖಂಡಿತವಾಗಿಯೂ ದೇವದೂತರು ಈ ಯುಗದ ಕೊನೆಯಲ್ಲಿ ನಡೆಯುವ ಘಟನೆಗಳಲ್ಲಿ ಹೆಚ್ಚು ಸಕ್ರಿಯರಾಗಿರುತ್ತಾರೆ – ಪ್ರಕ 7:1; 9:14-15; ("ದೇವದೂತ" ಎಂಬ ಪದ ಏಕವಚನವಾಗಿರಲಿ ಅಥವಾ ಬಹುವಚನವಾಗಿರಲಿ – ಪ್ರಕಟನೆಯ ಪುಸ್ತಕದಲ್ಲಿ ಸುಮಾರು 80 ಸಲ ಬರೆಯಲ್ಪಟ್ಟಿದೆ). ಸರಿಯಾದ ಸಮಯ ಬರುವ ತನಕ ದೇವರು ಕ್ರಿಸ್ತ ವಿರೋಧಿಯ ಪ್ರತ್ಯಕ್ಷತೆಯನ್ನು ತಡೆಯಲು ಒಬ್ಬನನ್ನು ನೇಮಿಸಿದ್ದಾನೆ ಎಂಬ ಸಾಧ್ಯತೆಯೂ ಇದೆ. ಇತರೆ ವಿವರಣೆಗಳ ಹಾಗೆ ಇದರ ವಿವರಣೆಯು ಈ ನೋಟ್ಸ್ ಗಳ ಗ್ರಂಥಕರ್ತನಿಗೆ ಉತ್ತಮವೆನಿಸಿದೆ. ಆದರೆ ಇದನ್ನು ಮತ್ತೊಮ್ಮೆ ಹೇಳಬೇಕು: ಪೌಲನು ತನ್ನ ಮಾತಿನ ಅರ್ಥವೇನು ಎಂದು ಹೇಳಿಲ್ಲ ಆದ್ದರಿಂದ ನಮಗೆ ನಿಜವಾಗಿಯೂ ಅದು ಏನೆಂದು ಗೊತ್ತಿಲ್ಲ. 7

**2:7** ಅಧರ್ಮಸ್ವರೂಪನು ಶಕ್ತನಾಗಿರುವನು, ಆದರೆ ಯೇಸು ಕ್ರಿಸ್ತನನ್ನು ಎದುರಿಸಲು ಅವನಿಂದ ಆಗುವದಿಲ್ಲ. ಪ್ರಕ 19:19-20 ನೋಡಿರಿ.

"*ತನ್ನ ಬಾಯ ಉಸಿರು*"– ಯೆಶಾಯ 11:4. "ಉಸಿರು" ಎಂದು ಭಾಷಾಂತರ ಮಾಡಿರುವ ಗ್ರೀಕ್ ಪದ "ಆತ್ಮ" ಎಂಬ ಅರ್ಥವನ್ನೂ ಕೊಡುತ್ತದೆ. ಇಲ್ಲಿ ಇದು ಆತನ ಸರ್ವಶಕ್ತವಾದ

ಮಾತುಗಳನ್ನು ಸೂಚಿಸುತ್ತದೆ (ಇಬ್ರಿ 1:3; 4:12 ರೊಂದಿಗೆ ಹೋಲಿಸಿ ನೋಡಿರಿ). ಯೇಸು ಕ್ರಿಸ್ತನು ಶಕ್ತನು ಆದರೂ ಆತನು ಮಾತನಾಡುವನು ಮತ್ತು ಆತನ ಉದ್ದೇಶವು ಖಂಡಿತವಾಗಿಯೂ ನೆರವೇರುವದು (ಆದಿ 1:3, ಇತ್ಯಾದಿ; ಯೆಶಾಯ 55:11 ರೊಂದಿಗೆ ಹೋಲಿಸಿ ನೋಡಿರಿ).

"*ಆತನ ಪ್ರತ್ಯಕ್ಷತೆಯ ಪ್ರಕಾಶ*"– ಮತ್ತಾಯ 24:30; 25:31; ತೀತ 2:13; ಪ್ರಕ 19:11-12. **9**

**2:9** ಯೇಸು ಕ್ರಿಸ್ತನ ಬರೋಣವು ದೇವರ ಕಾರ್ಯದ ಅನುಸಾರವಾಗಿದೆ. ಕ್ರಿಸ್ತ ವಿರೋಧಿಯ ಬರೋಣವು ಸೈತಾನನ ಕಾರ್ಯದ ಅನುಸಾರವಾಗಿದೆ (ಪ್ರಕ 13:2). ಸಹಜವಾಗಿ ಮಾನವರಿಗೆ ಕ್ರಿಸ್ತ ವಿರೋಧಿಯು ಯೇಸು ಕ್ರಿಸ್ತನಿಗಿಂತ ಭೂಲೋಕದಲ್ಲಿ ಹೆಚ್ಚು ಪ್ರಸಿದ್ಧನಾಗಿರುವನು, ಈ ಒಂದು ವಿಷಯದಿಂದಲೇ ಲೋಕದ ನಿಜವಾದ ಪರಿಸ್ಥಿತಿಯನ್ನು ತಿಳಿಯಬಹುದು – ಪ್ರಕ 13:3-4,8. ಯೋಹಾನ 1:10-11; 5:43 ರೊಂದಿಗೆ ಹೋಲಿಸಿ ನೋಡಿರಿ.

"*ಸೂಚಕಕಾರ್ಯ ಅಧ್ಭುತಕಾರ್ಯ*"– ಮತ್ತಾಯ 24:24; ಪ್ರಕ 13:13,15. ಈ ಅದ್ಭುತಕಾರ್ಯಗಳು ಯೇಸು ಕ್ರಿಸ್ತನು ಮಾಡಿದ ಅದ್ಭುತಕಾರ್ಯಗಳಿಗೆ ಬಹುತೇಕ ಸಮಾನವಾಗಿರುವವು (ಅಪೊ 2:22 ನೋಡಿರಿ, ಅಲ್ಲಿಯೂ ಇದೇ ವಾಕ್ಯವನ್ನು ಉಪಯೋಗಿಸಲಾಗಿದೆ). ಆದರೆ ಅದ್ಭುತಕಾರ್ಯಗಳು ವಂಚನೆಯವುಗಳಾಗಿರುತ್ತವೆ. ಗ್ರೀಕ್ ಪದದ ಅರ್ಥ "ನೈಜವಲ್ಲದ", "ಕೃತಕ", ಎಂಬ ಅರ್ಥವನ್ನು ಕೊಡುತ್ತದೆ ಆದರೂ ಬಹುತೇಕವಾಗಿ "ವಂಚನೆಯಾಗಿದೆ". ಬೇರೆ ಮಾತುಗಳಲ್ಲಿ ಹೇಳುವದಾದರೆ, ಅವು ನಿಜವಾದ ಅದ್ಭುತಕಾರ್ಯಗಳಾಗಿದ್ದು ಅವುಗಳನ್ನು ನೋಡುವವರು ಸುಳ್ಳುಗಳನ್ನು ನಂಬುವಂತೆ ಮಾಡುತ್ತವೆ. **10**

**2:10** "*ದುರ್ನೀತಿಯ ಎಲ್ಲಾ ವಂಚನೆ*"– ದುಷ್ಟತನವು ಜನರನ್ನು ಮೋಸಗೊಳಿಸುವದು (ಇಬ್ರಿ 3:13 ರೊಂದಿಗೆ ಹೋಲಿಸಿ ನೋಡಿರಿ). ಇದು ಲೋಕದಲ್ಲಿರುವ ಮೂರು ವಂಚನೆಯ ಶಕ್ತಿಗಳಲ್ಲಿ ಒಂದಾಗಿದೆ (ಉಳಿದೆರೆಡುಗಳಿಗಾಗಿ ಯೆರೆ 17:9 ಮತ್ತು ಪ್ರಕ 12:9 ನೋಡಿರಿ). ಈ ಯುಗದ ಕೊನೆಯಲ್ಲಿ ಮೂವರೂ ಘೋರವಾದ ಸ್ಥಿತಿಗೆ ಬರುವರು.

"*ನಾಶನದ ಮಾರ್ಗದಲ್ಲಿರುವವರು*"– 1 ಕೊರಿಂಥ 1:18; 2 ಕೊರಿಂಥ 2:15; 4:3; ಯೋಹಾನ 3:16. ನಾಶನದ ಮಾರ್ಗದಲ್ಲಿರುವವರು ದೇವರ ಸತ್ಯಕ್ಕೆ ಬದಲು ಪಾಪವನ್ನು ಪ್ರೀತಿಸುವವರಾಗಿದ್ದಾರೆ. ಅವರಿಗೆ ಸತ್ಯವು ಬೇಡ, ಅವರು ಅದನ್ನು ಬೇಕೆಂದೇ ನಿರಾಕರಿಸುತ್ತಾರೆ ಯಾಕಂದರೆ ಅವರು ತಮ್ಮ ಪಾಪ ಸ್ವಭಾವಕ್ಕೆ ಮೆಚ್ಚಿಕೆಯಾಗುವ ಕಾರ್ಯಗಳನ್ನು ಮಾತ್ರವೇ ಮಾಡಲು ಬಯಸುತ್ತಾರೆ. ಯೋಹಾನ 3:19-20; ರೋಮಾ 1:18 ರೊಂದಿಗೆ ಹೋಲಿಸಿ ನೋಡಿರಿ. ಪೌಲನು ಸತ್ಯವನ್ನು ಪ್ರೀತಿಸುವದು ಮತ್ತು ರಕ್ಷಣೆಯ ನಡುವೆ ಮಾಡಿರುವ ಸಂಪರ್ಕವನ್ನು ಎಚ್ಚರಿಕೆಯಿಂದ ಗಮನಿಸಿರಿ. ಒಂದನ್ನು ಬಿಟ್ಟು

ಇನ್ನೊಂದನ್ನು ಹೊಂದಲು ನಮ್ಮಿಂದ ಆಗುವದಿಲ್ಲ. **11**

**2:11** *"ಸುಳ್ಳು"*– ನಾನೇ ದೇವರು ಎಂದು ಕ್ರಿಸ್ತ ವಿರೋಧಿ ಹೇಳುವ ಸುಳ್ಳು (ವ 4). ಈ ಸುಳ್ಳನ್ನು ನಂಬಲು ಅವರು ಸಂಪೂರ್ಣವಾಗಿ ಮೋಸಹೋಗುವಂತೆ ದೇವರು ಮಾಡುವನು (ರೋಮಾ 1:28; 11:8; ಯೆಶಾಯ 29:10; 6:10; 1 ಅರಸು 22:19-23). ಇದು ಅವರು ಸತ್ಯವನ್ನು ನಿರಾಕರಿಸುವದಕ್ಕೆ ಅವರಿಗಾಗುವ ಶಿಕ್ಷೆಯಾಗಿದೆ ಮತ್ತು ಇದು ಸಂಪೂರ್ಣವಾಗಿ ಯುಕ್ತವಾದ ಶಿಕ್ಷೆಯಾಗಿದೆ. ಇದು ದೇವರು ಪಾಪಿಯಾದ ಜನರಿಗೆ ಕೊಡುವ ತಕ್ಕದಾಗಿರುತ್ತದೆ. ಕೀರ್ತನೆ 18:25-26 ಮತ್ತು ನೋಟ್ ನೋಡಿರಿ. **12**

**2:12** ಸತ್ಯವನ್ನು ನಿರಾಕರಿಸುವದು ಅತ್ಯಂತ ಅಪಾಯಕಾರಿಯಾದ ಕಾರ್ಯವಾಗಿದೆ. ಇದರಿಂದ ತಪ್ಪನ್ನು ನಂಬುವದು ಮಾತ್ರವಲ್ಲ ನಿತ್ಯವಾದ ದಂಡನೆಯು ಎದುರಾಗುತ್ತದೆ.

*"ನ್ಯಾಯತೀರ್ಪು"*– ಮತ್ತಾಯ 23:33; ಮಾರ್ಕ 16:16; ಯೋಹಾನ 3:18; 5:29; ಗಲಾ 1:8 ರೊಂದಿಗೆ ಹೋಲಿಸಿ ನೋಡಿರಿ.

*"ಅನೀತಿ"*– ದುಷ್ಟತನದಲ್ಲಿ ಆನಂದಿಸುವದು ಮತ್ತು ಸತ್ಯವನ್ನು ನಂಬುವದು ಎರಡೂ ವಿರುದ್ಧ ಪದಗಳಾಗಿವೆ ಎಂಬದನ್ನು ನಂಬಿರಿ. ಒಂದುವೇಳೆ ನಾವು ಒಂದನ್ನು ಮಾಡಿದರೆ ಇನ್ನೊಂದನ್ನು ಮಾಡಲು ಆಗುವದಿಲ್ಲ. **13**

**2:13** *"ಕರ್ತನಿಗೆ ಪ್ರಿಯರಾಗಿರುವ ಸಹೋದರರೇ"*– ಕೊಲೊ 3:12; 1 ಥೆಸ 1:4; 1 ಯೋಹಾನ 3:1.

*"ರಕ್ಷಣೆಯನ್ನು ಪಡೆಯುವದಕ್ಕಾಗಿ ದೇವರು ನಿಮ್ಮನ್ನು ಆದಿಯಿಂದ ಆರಿಸಿಕೊಂಡಿದ್ದಾನೆ"*– ಎಫೆ 1:4.

*"ಪವಿತ್ರಾತ್ಮನಿಂದ ಶುದ್ಧೀಕರಣ"*– 1 ಪೇತ್ರ 1:2. ಇದರ ಅರ್ಥ ದೇವರಾತ್ಮನು ತಾನಾದುಕೊಂಡವರನ್ನು ಬೇರ್ಪಡಿಸುತ್ತಾನೆ ಮತ್ತು ಅವರನ್ನು ಪರಿಶುದ್ಧರನ್ನಾಗಿ ಮಾಡಲು ಅವರಲ್ಲಿ ತನ್ನ ಕಾರ್ಯವನ್ನು ಪ್ರಾರಂಭಿಸುತ್ತಾನೆ. ಇದು ವಿಶೇಷವಾಗಿರುವ ಕೆಲವರಲ್ಲಿ ಮಾತ್ರವಲ್ಲ ಬದಲಾಗಿ ಪ್ರತಿಯೊಬ್ಬ ವಿಶ್ವಾಸಿಯಲ್ಲಿಯೂ ಸತ್ಯವಾಗಿದೆ.

*"ಸತ್ಯದ ಮೇಲಿನ ನಂಬಿಕೆಯಿಂದ"*– ದೇವರು ಜನರನ್ನು ರಕ್ಷಿಸಲು ಈ ವಿಧಾನವನ್ನು ಉಪಯೋಗಿಸುತ್ತಾನೆ. ಮತ್ತೊಮ್ಮೆ ಸತ್ಯಕ್ಕೆ ಪ್ರಾಮುಖ್ಯತೆ ಕೊಡಲಾಗಿರುವದನ್ನು ನೋಡಿರಿ. ಪೌಲನು ಇಲ್ಲಿ ಹೇಳುತ್ತಿರುವದು ಯೇಸು ಕ್ರಿಸ್ತನ ಸುವಾರ್ತೆಯಾಗಿದೆ, ಇದನ್ನು ಅವನು ಮುಂದಿನ ವಚನದಲ್ಲಿ ಸ್ಪಷ್ಟಪಡಿಸಿದ್ದಾನೆ. **14**

**2:14** *"ಕರೆದನು"*– ರೋಮಾ 1:6; 8:28,30 ನೋಡಿರಿ.

*"ನಮ್ಮ ಸುವಾರ್ತೆ"*– ಅವರು ಬೋಧಿಸಿದ ಸುವಾರ್ತೆ, ಯೇಸು ಕ್ರಿಸ್ತನು ಅವರಿಗೆ ಒಪ್ಪಿಸಿದ ಸುವಾರ್ತೆ (ಗಲಾ 1:11-12; 1 ಕೊರಿಂಥ 15:1-8).

*"ಪ್ರಭಾವವನ್ನು ಸಂಪಾದಿಸಿಕೊಳ್ಳಲು"*– 1 ಥೆಸ 2:12; ರೋಮಾ 5:2; 8:17; ಯೋಹಾನ

17:22. ಸತ್ಯವನ್ನು ನಂಬುವವರು ಮತ್ತು ನಂಬದಿರುವವರ ನಡುವೆಯ ವ್ಯತ್ಯಾಸ ಇದುವೇ ಆಗಿದೆ – ಒಂದು ಗುಂಪು ನಿತ್ಯವಾದ ಪ್ರಭಾವವನ್ನು ಹೊಂದುತ್ತದೆ, ಮತ್ತೊಂದು ನಿತ್ಯವಾದ ನ್ಯಾಯತೀರ್ಪಿಗೆ ಗುರಿಯಾಗುತ್ತದೆ (ವ 12). ರೋಮಾ 9:22-24 ರೊಂದಿಗೆ ಹೋಲಿಸಿ ನೋಡಿರಿ. **15**

**2:15** *"ಹೀಗಿರುವದರಿಂದ"*– ಆತನು ಅವರಿಗೆ ತಿಳಿಸಿರುವ ಸತ್ಯದ ಬೆಳಕಿನಲ್ಲಿ ಅವರಿಗೂ (ಮತ್ತು ನಮಗೂ) ಆ ಸತ್ಯವನ್ನು ಬಿಗಿಯಾಗಿ ಹಿಡಿದುಕೊಳ್ಳುವಂತೆ ಹೇಳಿದ್ದಾನೆ. ರೋಮಾ 12:1; ಎಫೆ 4:1; ಕೊಲೊ 3:1 ರೊಂದಿಗೆ ಹೋಲಿಸಿ ನೋಡಿರಿ.

*"ದೃಢವಾಗಿ ನಿಲ್ಲಿರಿ"*– 1 ಕೊರಿಂಥ 15:58; ಎಫೆ 6:11,13,14. **16**

**2:16** ಪೌಲನು ಕರ್ತನಾದ ಯೇಸು ಕ್ರಿಸ್ತನು ಮತ್ತು ತಂದೆಯ ನಡುವೆಯಿರುವ ವ್ಯತ್ಯಾಸ ತಿಳಿಸಿರುವದನ್ನು ಗಮನಿಸಿರಿ. ಹಾಗೆಯೇ ಮತ್ತಾಯ 3:16-17; 28:19; ಯೋಹಾನ 17:1; 2 ಯೋಹಾನ 3 ನೋಡಿರಿ.

*"ನಮ್ಮನ್ನು ಪ್ರೀತಿಸಿ"*– ವ 13; ಯೆರೆ 31:3.

*"ನಿರೀಕ್ಷೆ"*– 1 ಪೇತ್ರ 1:3; ರೋಮಾ 5:2; 8:24-25. **17**

**2:17** *"ದೃಢಪಡಿಸುವಿಕೆ"*– ಅಥವಾ "ಪ್ರೋತ್ಸಾಹ" – 2 ಕೊರಿಂಥ 1:3-4. ಮಾನವರು ಒಬ್ಬರನ್ನೊಬ್ಬರು ದೃಢಪಡಿಸಿಕೊಳ್ಳಬಹುದು ಆದರೆ ಉತ್ತಮವಾದ ದೃಢಪಡಿಸುವಿಕೆಯು ದೇವರಿಂದಾಗುತ್ತದೆ.

# 3 1

**3:1** *"ನಮಗೋಸ್ಕರ ಪ್ರಾರ್ಥನೆ ಮಾಡಿರಿ"*– ರೋಮಾ 15:30-32; ಎಫೆ 6:19-20; ಕೊಲೊ 4:3-4.

*"ಕರ್ತನ ವಾಕ್ಯವು . . . ಪ್ರಖ್ಯಾತಿ"*– ಪೌಲನು ದೇವರ ಸೇವೆಗಾಗಿ ಭೌತಿಕ ಕಾರ್ಯಗಳು ಅಥವಾ ಹಣ ಸಿಗುವಂತೆ ಪ್ರಾರ್ಥನೆ ಮಾಡಲು ಯಾವುದೇ ಸಭೆಗಳಿಗೂ ಹೇಳಲಿಲ್ಲ. ಅವನ ಮನಸ್ಸು ಮತ್ತು ಹೃದಯ ಬೇರೆ ವಿಷಯಗಳ ಮೇಲಿದ್ದವು – ದೇವರ ಸೇವೆ ಮಾಡಲು ಬಯಸುವದಾದರೆ ನಮ್ಮ ಮನಸ್ಸು ಹಾಗೂ ಹೃದಯಗಳು ಅವುಗಳ ಮೇಲೆಯೇ ಇರಬೇಕು. **2**

**3:2** ಈ ಸಮಯದಲ್ಲಿ ಪೌಲನು ಕೊರಿಂಥದಲ್ಲಿದ್ದನು ಮತ್ತು ದುಷ್ಟಜನರು ಅವನನ್ನು ವಿರೋಧಿಸುತ್ತಾ ಇದ್ದರು – ಅಪೊ 18:12-13. **3**

**3:3** *"ನಂಬಿಗಸ್ತನು"*– 1 ಕೊರಿಂಥ 1:9; 10:13; 1 ಥೆಸ 5:24; 2 ತಿಮೊ 2:13; ಇಬ್ರಿ 3:16; 1 ಪೇತ್ರ 4:19; 1 ಯೋಹಾನ 1:9; ಪ್ರಕ 19:11.

*"ಕೆಡುಕನಿಂದ"*– ಮತ್ತಾಯ 6:13; ಯೋಹಾನ 17:11,15. **4**

**3:4** *"ಕರ್ತನಲ್ಲಿ ಭರವಸೆ"*– 2 ಕೊರಿಂಥ 2:3; 7:4; ಗಲಾ 5:10; ಇಬ್ರಿ 6:9.

*“ನಾವು ಆಜ್ಞಾಪಿಸುವ ಪ್ರಕಾರ”*– ಯೇಸು ಕ್ರಿಸ್ತನ ರಾಯಭಾರಿಯಾಗಿ (2 ಕೊರಿಂಥ 5:20), ಸತ್ಯದ ವಿಷಯದಲ್ಲಿ ದೇವರಿಂದ ವಿಶೇಷವಾದ ಪ್ರಕಟನೆಯನ್ನು ಹೊಂದಿದವನಾಗಿ (ಗಲಾ 1:11-12; ಎಫೆ 3:2-3) ಪೌಲನು ಯೇಸು ಕ್ರಿಸ್ತನ ಹೆಸರಿನಲ್ಲಿ ಸಂಪೂರ್ಣ ಅಧಿಕಾರದಿಂದ ಮಾತನಾಡಬಹುದಾಗಿತ್ತು (ವ 6). ಅವನು ಸಭೆಗೆ ಬರೆದ ವಿಷಯಗಳು ಯೇಸು ಕ್ರಿಸ್ತನಿಂದ ಬಂದ ಆಜ್ಞೆಗಳಂತೆಯೇ ಇದ್ದವು. **5**

**3:5** *“ಪ್ರೀತಿ”*– ಎಫೆ 3:17-19; ರೋಮಾ 5:5.

*“ಕ್ರಿಸ್ತನ ತಾಳ್ಮೆ”*– ಯೇಸು ಕ್ರಿಸ್ತನು ಭೂಲೋಕದಲ್ಲಿ ಇದ್ದಾಗ, ಮಾನವರು ಮತ್ತು ಸೈತಾನನಿಂದ ಎದುರಾದ ಎಲ್ಲಾ ರೀತಿಯ ವಿರೋಧಗಳ ನಡುವೆಯೂ ತಾಳ್ಮೆಯಿಂದ ದೇವರ ಚಿತ್ತವನ್ನು ನೆರವೇರಿಸಿದನು. ವಿಶ್ವಾಸಿಗಳೆಲ್ಲರಲ್ಲಿಯೂ ಈ ಗುಣ ಇರಬೇಕೆಂದು ಆತನು ಬಯಸುತ್ತಾನೆ ಮತ್ತು ಆತನು ತಾನೇ ನಮ್ಮ ಹೃದಯಗಳಲ್ಲಿ ಕಾರ್ಯ ಮಾಡುತ್ತಾನೆ. ಇಬ್ರಿ 12:1-3 ರೊಂದಿಗೆ ಹೋಲಿಸಿ ನೋಡಿರಿ. **6**

**3:6** *“ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ”*– ಕರ್ತನ ಅಧಿಕಾರದಿಂದ (ವ 4). ವಿಶ್ವಾಸಿಗಳು ಕೆಳಗೆ ಕೊಡಲಾಗಿರುವ ಆಜ್ಞೆಗಳನ್ನು ಯೇಸು ಕ್ರಿಸ್ತನ ಆಜ್ಞೆಗಳೆಂದು ಪರಿಗಣಿಸಬೇಕು.

*“ದೂರವಾಗಿರಬೇಕು”*– ಇದು ಸಂಪೂರ್ಣ ವಿರಾಮವಲ್ಲ ಬದಲಾಗಿ ಹತ್ತಿರದ ಅನ್ಯೋನ್ಯತೆಯಿಂದ ಹಿಂದೆ ಸರಿಯುವದು ಮತ್ತು ಅದಕ್ಕಿಂತಲೂ ಹೆಚ್ಚಿನದಾಗಿದೆ. ಒಂದುವೇಳೆ ಯಾವ ಸಹೋದರ (ಅಥವಾ ಸಹೋದರಿಯಾಗಲಿ) ಪೌಲನ ಬೋಧನೆಗನುಸಾರ ಜೀವಿಸುತ್ತಿಲ್ಲವೆಂದರೆ, ನಮಗೇನೂ ಸಂಬಂಧವಿಲ್ಲ ಎಂಬ ರೀತಿಯಲ್ಲಿ ನಾವು ಅವರೊಂದಿಗೆ ನಡೆದುಕೊಳ್ಳಬಾರದು. ಬದಲಾಗಿ ನಾವಾಗಲೀ ದೇವರಾಗಲೀ ಅವರ ವಿಷಯದಲ್ಲಿ ಸಂತೋಷಿಸುವದಿಲ್ಲ ಎಂಬದನ್ನು ಅವರಿಗೆ ಸ್ಪಷ್ಟಪಡಿಸಬೇಕು. ವ 14,15 ರೊಂದಿಗೆ ಹೋಲಿಸಿ ನೋಡಿರಿ. **7**

**3:7** *“ನೀವು ನಮ್ಮನ್ನು ಅನುಸರಿಸಿರಿ”*– ಅಪೊ 18:3; 20:34-35. **9**

**3:9** *“ಹಕ್ಕು”*– 1 ಕೊರಿಂಥ 9:12-15.

*“ಅನುಸರಣೆ”*– ಪೌಲನು ನಮ್ಮೆಲ್ಲರಿಗೂ ಕೆಲಸದ ವಿಷಯದಲ್ಲಿ ಮಾತ್ರವಲ್ಲ ಬದಲಾಗಿ ನಾವು ಕ್ರೈಸ್ತೀಯ ಜೀವಿತವನ್ನು ಹೇಗೆ ಎಂಬ ವಿಷಯದಲ್ಲಿಯೂ ಮಾದರಿಯಾಗಿದ್ದಾನೆ (1 ಕೊರಿಂಥ 11:1; ಫಿಲಿಪ್ಪಿ 3:17). **10**

**3:10** *“ಕೆಲಸ ಮಾಡಲೊಲ್ಲದವನು”*– ಆತನು ಕೆಲಸ ಮಾಡಲು ಬಯಸುವ ವ್ಯಕ್ತಿಗಳನ್ನು ಸೂಚಿಸುತ್ತಾ ಇಲ್ಲ ಬದಲಾಗಿ ಯಾರೂ ಸಿಗುತ್ತಾ ಇಲ್ಲ, ಆದರೆ ಅವಕಾಶ ಇರುವಾಗಲೂ ಕೆಲಸ ಮಾಡಲು ನಿರಾಕರಿಸುವವರನ್ನು ಸೂಚಿಸುತ್ತಾ ಇದ್ದಾನೆ. **11**

**3:11** *“ಇತರೆ ಕೆಲಸದಲ್ಲಿ ತಲೆ ಹಾಕುವವರು”*– 1 ತಿಮೊ 5:13. ಆಲಸ್ಯತನವು

ಸಾಮಾನ್ಯವಾಗಿ ಇತರರ ಕೆಲಸಗಳಲ್ಲಿ ತಲೆ ಹಾಕುವಂತೆ ಮಾಡುತ್ತದೆ. ಹೀಗೆ ಪಾಪದೊಂದಿಗೆ ಪಾಪವು ಸೇರಿಕೊಳ್ಳುತ್ತದೆ ಮತ್ತು ಅದರ ಫಲಿತಾಂಶವು ಇಡೀ ಸಭೆಗೆ ತೊಂದರೆಯಾಗಿರುತ್ತದೆ. **13**

- **3:13** ಗಲಾ 6:9; 1 ಕೊರಿಂಥ 15:58. **14-15**

**3:14-15** ವ 6 ರ ನೋಟ್ಸ್ ನೋಡಿರಿ. ಅವಿಧೇಯರಾದ ಕ್ರೈಸ್ತರನ್ನು ಕ್ರಮಪಡಿಸಿರಿ ಎಂದು ಪೌಲನು ಅವರನ್ನು ಪ್ರೋತ್ಸಾಹಪಡಿಸುತ್ತಾ ಇದ್ದಾನೆ. ಕ್ರಮಶಿಕ್ಷಣವು ಅವರಿಗೆ ಅವರ ನಡವಳಿಕೆಯ ವಿಷಯದಲ್ಲಿ ನಾಚಿಕೆಯನ್ನು ಹುಟ್ಟಿಸುವದು ಮತ್ತು ದೇವರು ಬಯಸುವ ರೀತಿಯಲ್ಲಿ ಜೀವಿಸಲು ಪ್ರಾರಂಭಿಸುವಂತೆ ಅವರನ್ನು ಪ್ರೋತ್ಸಾಹಪಡಿಸುವದು. **16**

**3:16** *"ಶಾಂತಿದಾಯಕನಾದ ಕರ್ತನು"*– ರೋಮಾ 15:33; 16:20; 2 ಕೊರಿಂಥ 13:11; ಫಿಲಿಪ್ಪಿ 4:9; 1 ಥೆಸ 5:23; ಇಬ್ರಿ 13:20 ರೊಂದಿಗೆ ಹೋಲಿಸಿ ನೋಡಿರಿ.

*"ಶಾಂತಿ"*– ಫಿಲಿಪ್ಪಿ 4:6-7 ರಲ್ಲಿ ಆತನು ಯೇಸು ಕ್ರಿಸ್ತನು ಕೊಡುವ ಶಾಂತಿಯನ್ನು ಹೊಂದುವದು ಹೇಗೆ ಎಂಬದನ್ನು ತಿಳಿಸಿದ್ದಾನೆ. **17**

**3:17** ಪೌಲನು ಕೆಲವು (ಮತ್ತು ಬಹುಶಃ ಎಲ್ಲಾ) ತನ್ನ ಪತ್ರಿಕೆಗಳನ್ನು ಹೇಳುತ್ತಾ ಇದ್ದನು ಮತ್ತು ಇತರರು ಅದನ್ನು ಬರೆಯುತ್ತಾ ಇದ್ದರು. ರೋಮಾ 16:22 ರೊಂದಿಗೆ ಹೋಲಿಸಿ ನೋಡಿರಿ. ಸುಳ್ಳು ಬೋಧಕರು ತನ್ನ ಹೆಸರಿನಲ್ಲಿ ಸಭೆಗಳಿಗೆ ಪತ್ರಿಕೆಗಳನ್ನು ಬರೆಯುವ ಸಾಧ್ಯತೆಯಿದೆ ಎಂಬದನ್ನು ಅವನು ಬಲ್ಲವನಾಗಿದ್ದನು – 2:2. ಆದ್ದರಿಂದ ಅವನು ತನ್ನ ಎಲ್ಲಾ ಪತ್ರಿಕೆಗಳಲ್ಲಿಯೂ ಕೊನೆಯಲ್ಲಿ ತಾನೇ ಕೆಲವು ವಿಷಯಗಳನ್ನು ಬರೆಯುತ್ತಾ ಇದ್ದನು – 1 ಕೊರಿಂಥ 16:21; ಗಲಾ 6:11; ಕೊಲೊ 4:18 ನೋಡಿರಿ. **18**

- **3:18** ರೋಮಾ 1:7; 16:20.